ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 13-11-69.

(ओम शान्ति, बापदादा. अव्यक्त मुरली 13-11-1969)

*ಬಾಪ್ ದಾದಾರವರ ಭರವಸೆಗಳು* (बापदादा की उम्मीदें)

ಅಶರೀರಿಯಾಗಿ ಮತ್ತೆ ಶರೀರದಲ್ಲಿ ಬರುವ ಅಭ್ಯಾಸ ಪಕ್ಕಾ ಆಗುತ್ತಿದೆಯೇ? ಹೇಗೆ ಬಾಪ್ ದಾದಾ ಆಶರೀರಿಯಾಗಿ ಶರೀರದಲ್ಲಿ ಬರುತ್ತಾರೋ ಹಾಗೆಯೇ ನೀವೂ ಅಶರೀರಿಯಾಗಿ ಶರೀರದಲ್ಲಿ ಬರಬೇಕು. ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಮತ್ತೆ ವ್ಯಕ್ತದಲ್ಲಿ ಬರಬೇಕು. ಈ ರೀತಿಯ ಅಭ್ಯಾಸವನ್ನು ದಿನ-ದಿನಕ್ಕೆ ಹೆಚ್ಚು ಮಾಡುತ್ತಿರುವಿರಾ? ಬಾಪ್ ದಾದಾ ಬಂದಾಗ ಯಾರನ್ನು ಮಿಲನ ಮಾಡಲು ಬರುತ್ತಾರೆ? (ಆತ್ಮರನ್ನು) ಯಾವ ಆತ್ಮರನ್ನು? ಇಡೀ ವಿಶ್ವದಲ್ಲಿಯ ಶ್ರೇಷ್ಠ ಆತ್ಮರನ್ನು. ಶ್ರೇಷ್ಠ ಆತ್ಮರೊಂದಿಗೆ ಬಾಪ್ ದಾದಾರ ಮಿಲನವಾಗುತ್ತದೆ. ನಾವೇ ಇಡೀ ವಿಶ್ವದ ಶ್ರೇಷ್ಠ ಆತ್ಮರೆಂಬ ನಶೆಯಿರುತ್ತದೆಯೇ? ಶ್ರೇಷ್ಠ ಆತ್ಮರಿಗೆ ಸರ್ವಶಕ್ತಿವಂತನ ಮಿಲನದ ಸೌಭಾಗ್ಯ ಪ್ರಾಪ್ತಿಯಾಗುತ್ತದೆ. ಬಾಪ್ ದಾದಾ ಭೃಕುಟಿಯ ಮಧ್ಯದಲ್ಲಿ ಹೊಳೆಯುತ್ತಿರುವ ನಕ್ಷತ್ರವನ್ನೇ ನೋಡುತ್ತಾರೆ. ನಿಮ್ಮನ್ನು (ನಕ್ಷತ್ರಗಳನ್ನು) ಯಾವ ಹೆಸರುಗಳಿಂದ ಕರೆಯಲಾಗುತ್ತದೆ? ಭಾಗ್ಯದ ನಕ್ಷತ್ರವೂ ಆಗಿದ್ದೀರಿ ಮತ್ತು ನಯನದ ನಕ್ಷತ್ರವೂ ಆಗಿದ್ದೀರಿ ಮತ್ತು ಯಾವ ನಕ್ಷತ್ರವಾಗಿದ್ದೀರಿ? ಮಕ್ಕಳ ಯಾವ ಕಾರ್ಯ ಇನ್ನೂ ಉಳಿದಿದೆಯೋ ಆ ಹೆಸರಿನ ನಕ್ಷತ್ರ ಮರೆತಿರುವಿರಿ. ಪರಿಶ್ರಮದ ಕಾರ್ಯವನ್ನು ಮರೆತಿರುವಿರಿ. ತಮ್ಮ ಕರ್ತವ್ಯವನ್ನು ನೆನಪು ಮಾಡಿಕೊಳ್ಳಿ, ಬಾಪ್ ದಾದಾರ ಭರವಸೆಯ ನಕ್ಷತ್ರಗಳು, ಈ ಕಾರ್ಯವೇ ಇನ್ನೂ ಉಳಿದಿದೆ. ಬಾಪ್ ದಾದಾ ಯಾವ ಭರವಸೆಗಳನ್ನು ಮಕ್ಕಳ ಮೇಲಿಟ್ಟಿರುವರೋ ಆ ಕಾರ್ಯವನ್ನು ಪೂರ್ಣ ಮಾಡಿರುವಿರೇ? ಒಬ್ಬೊಬ್ಬರೂ ಅನೇಕರಿಗೆ ಪರಿಚಯವನ್ನು ಕೊಟ್ಟು ಯೋಗ್ಯರನ್ನಾಗಿ ಮಾಡಲಿ ಎಂಬ ಭರವಸೆಯನ್ನು ಬಾಪ್ ದಾದಾ ಒಂದೊಂದು ನಕ್ಷತ್ರದಲ್ಲಿ ಇಟ್ಟುಕೊಂಡಿದ್ದಾರೆ. ಒಬ್ಬರಿಂದಲೇ ಅನೇಕರಾಗುವರು. ನಾವು ಹೀಗೆ ಆಗಿದ್ದೇವಾ ಎಂದು ಪರೀಕ್ಷಿಸಿಕೊಳ್ಳಿ. ಅನೇಕರನ್ನು ಮಾಡಿದ್ದೇವಾ? ಅದರಲ್ಲೂ ಬಹಳ ಸಂಖ್ಯೆಯಲ್ಲಿ(quantity) ತಯಾರಾಗುತ್ತಿದ್ದಾರೆ, ಆದರೆ ಗುಣಮಟ್ಟ (quality) ಹೆಚ್ಚಬೇಕು. ಸಂಖ್ಯೆ ಹೆಚ್ಚಿಸುವುದು ಸಹಜ ಆದರೆ ಗುಣಮಟ್ಟದವರನ್ನು ಮಾಡುವ ಭರವಸೆಯನ್ನು ಬಾಪ್ ದಾದಾ ಈ ನಕ್ಷತ್ರಗಳಲ್ಲಿ ಇಟ್ಟುಕೊಂಡಿದ್ದಾರೆ. ಈಗ ಈ ಕಾರ್ಯ ಉಳಿದಿದೆ. ಸಂಖ್ಯೆಯನ್ನು ಹೆಚ್ಚಿಸುವುದು ನಡೆದೇ ಇದೆ ಆದರೆ ಈಗ ಈ ರೀತಿ ಶ್ರೇಷ್ಠ ಗುಣಮಟ್ಟದ ಆತ್ಮಗಳನ್ನು ತಯಾರು ಮಾಡುವ ಸೇವೆ ಉಳಿದಿದೆ. ಶ್ರೇಷ್ಠ ಗುಣಮಟ್ಟದ ಒಂದು ಆತ್ಮ ಅನೇಕರನ್ನು ತರುವರು. ಗುಣಮಟ್ಟದ ಆತ್ಮರು ಬಹುಸಂಖ್ಯೆಯಲ್ಲಿ ತರಲು ಸಾಧ್ಯ. ಈಗ ಇದೇ ಉಳಿದಿರುವಂತಹ ಸೇವೆಯನ್ನು ಪೂರ್ಣ ಮಾಡಬೇಕು. ತಮ್ಮ ಸೇವೆಯ ಗುಣಮಟ್ಟದಿಂದ ತಾವು ಸ್ವಯಂ ಸಂತುಷ್ಟರಾಗಿರುತ್ತೀರಾ? ಸಂಖ್ಯೆಯನ್ನು ನೋಡಿ ಖುಷಿ ಪಡುತ್ತೀರಿ. ಆದರೆ ಗುಣಮಟ್ಟವನ್ನು ನೋಡಿ ಸೇವೆಯಲ್ಲಿ ಸಂತುಷ್ಟರಾಗಬೇಕು. ಶ್ರೇಷ್ಠ ಗುಣಮಟ್ಟವನ್ನು ಹೇಗೆ ತರುವಿರಿ? ಯಾರಲ್ಲಿ ಎಷ್ಟೆಷ್ಟು ದೈವೀ ಗುಣವಿರುವುದೋ ಅಷ್ಟೇ ಒಳ್ಳೆಯ ಗುಣಮಟ್ಟದವರನ್ನು ತರುವರು. ತಮ್ಮ ಪುರುಷಾರ್ಥದಲ್ಲಿ ಮತ್ತು ಸೇವೆಯಲ್ಲಿ ಅನೇಕ ಮಕ್ಕಳಿಗೆ ಎಲ್ಲಾ ಪ್ರಕಾರದ ಪರಿಶ್ರಮವನ್ನು ಬಹಳ ಮಾಡಬೇಕಾಗುತ್ತದೆ. ಕೆಲವರಿಗೆ ಹೆಚ್ಚು ಕೆಲವರಿಗೆ ಕಡಿಮೆ ಮಾಡಬೇಕಾಗುತ್ತದೆ. ಇದಕ್ಕೆ ಕಾರಣವೇನು? ಕೆಲವು ವೇಳೆ ಪರಿಶ್ರಮವೆನಿಸುತ್ತದೆ ಮತ್ತೆ ಪುನಃ ಅವರಿಗೇ ಸಹಜವೆನಿಸುತ್ತದೆ. ಹೀಗೇಕೆ? ಧಾರಣೆಯ ಕೊರತೆಯಿಂದ ಪರಿಶ್ರಮ ಎನಿಸುತ್ತದೆ? ಇವರ ಭಾಗ್ಯದಲ್ಲಿಯೇ ಇಲ್ಲ ಎಂದು ಅನೇಕ ಕರ್ತವ್ಯಗಳಲ್ಲಿ ಜನರು ಹೇಳುತ್ತಾರೆ. ಆದರೆ ಇಲ್ಲಿ ಹಾಗೆ ಹೇಳುವುದಿಲ್ಲ. ಯಾವ ವಿಶೇಷತೆ ಕಡಿಮೆ ಇರುವ ಕಾರಣದಿಂದ ಪರಿಶ್ರಮವೆನಿಸುತ್ತದೆ?ಶ್ರೀಮತದಂತೆ ನಡೆಯಬೇಕು ಆದರೂ ಏಕೆ ನಡೆಯಲಾಗುತ್ತಿಲ್ಲ? ಜ್ಞಾನದ ವಿಚಾರಗಳು ಬುದ್ಧಿಯಲ್ಲಿವೆ ಆದರೆ ಅವುಗಳ ಸೂಕ್ಷ್ಮ (ಆಳ)ಕ್ಕೆ ಹೋಗದಿರುವ ಕಾರಣದಿಂದ ಯಾವುದೇ ಕಾರ್ಯದಲ್ಲಾಗಲಿ, ಪುರುಷಾರ್ಥದಲ್ಲಾಗಲಿ, ಸೇವೆಯಲ್ಲಾಗಲಿ ಪರಿಶ್ರಮವೆನಿಸುವುದು. ಸೂಕ್ಷ್ಮ ಬುದ್ಧಿಯವರಿಗೆ ಎಂದೂ ಪರಿಶ್ರಮ

ಎನಿಸುವುದಿಲ್ಲ. ಸ್ಥೂಲ ಬುದ್ಧಿಯ ಕಾರಣ ಪರಿಶ್ರಮವೆನಿಸುತ್ತದೆ. ಶ್ರೀಮತದಂತೆ ನಡೆಯಲು ಸಹ ಸೂಕ್ಷ್ಮ ಬುದ್ಧಿ ಬೇಕು, ಜ್ಞಾನದ ಆಳಕ್ಕೆ ಹೋಗುವ ಅಭ್ಯಾಸ ಬೇಕು. ಏನನ್ನು ಕೇಳಿದಿರೋ ಅದನ್ನು ಮಾಡುವುದು ಎಂದು ಬೇರೆ ಶಬ್ದಗಳಲ್ಲಿ ಹೇಳಲಾಗುತ್ತದೆ ಎಂದರೆ ಸೂಕ್ಷ್ಮತೆಗೆ ಹೋಗುವುದು. ಮೊಸರನ್ನು ಮಂಥನ ಮಾಡಿದಾಗ (ಕಡೆದಾಗ) ಬೆಣ್ಣೆ ಬರುತ್ತದೆ. ಇದೂ ಸಹ ಆಳಕ್ಕೆ ಹೋಗುವ ಮಾತಾಗಿದೆ. ಆಳಕ್ಕೆ ಹೋಗುವ (ಮಂಥನದ) ಕೊರತೆಯ ಕಾರಣದಿಂದ ಪರಿಶ್ರಮವೆನಿಸುತ್ತದೆ. ಆ ಮಾತಿನ ಸೂಕ್ಷ್ಮತೆಗೆ ಹೋಗುವ ಬದಲು ಸ್ಥೂಲ ರೂಪವನ್ನು ನೋಡುತ್ತೀರಿ. ಸೇವೆಯ ಸಮಯದಲ್ಲೂ ಸೂಕ್ಷ್ಮ ಬುದ್ಧಿಯಿರಲಿ, ಜ್ಞಾನದ ಆಳಕ್ಕೆ ಹೋಗಿ ಅದನ್ನು ಹೇಳಿ ಅದರ ಅನುಭವ ಮಾಡಿಸಿದರೆ ಕೇಳುವವರಿಗೂ ಮತ್ತು ತಮಗೂ ಪರಿಶ್ರಮ ಕಡಿಮೆ ಅನಿಸುವುದು. ಇಂತಹ ಸೂಕ್ಷ್ಮತೆಯ ಕೊರತೆಯಿದೆ. ಈಗ ಇದೇ ಪುರುಷಾರ್ಥವನ್ನು ಮಾಡಿ.

ಶರೀರದ ಶಕ್ತಿಯೂ ಯಾವಾಗ ಬರುತ್ತದೆ? ಭೋಜನವನ್ನು ಅಗೆದು ತಿಂದಾಗ ಶಕ್ತಿ ಬರುತ್ತದೆ. ಭೋಜನದ ಸೂಕ್ಷ್ಮರೂಪ ಯಾವುದಾಗುತ್ತದೆ? ರಕ್ತ, ಯಾವಾಗ ರಕ್ತವಾಗುವುದೋ ಆಗ ಶಕ್ತಿ ಬರುವುದು, ಆದ್ದರಿಂದ ಈಗ ಕೇವಲ ಹೊರಗಿನ, ಮೇಲಿನ ರೂಪ ನೋಡುವುದನ್ನು ಬಿಟ್ಟು ಒಳಗೆ ಹೋಗುವ ಪ್ರಯತ್ನವನ್ನು ಮಾಡಿ. ಎಷ್ಟು ಪ್ರತಿಯೊಂದು ಮಾತಿನಲ್ಲಿ ಆಳಕ್ಕೆ ಹೋಗುತ್ತಿರೋ ಅಷ್ಟು ರತ್ನಗಳು ನೋಡಲು ಸಿಗುವವು. ಮತ್ತು ಪ್ರತಿಯೊಂದು ಮಾತಿನ ಬೆಲೆ ಗೊತ್ತಾಗುವುದು. ಜ್ಞಾನದ ಬೆಲೆ, ಸೇವೆಯ ಬೆಲೆ ಎಷ್ಟು ತಿಳಿಯುವುದೋ ಅಷ್ಟು ತಾವು ಬೆಲೆಬಾಳುವ ರತ್ನವಾಗುವಿರಿ, ಜ್ಞಾನರತ್ನಗಳ ಬೆಲೆ ಕಡಿಮೆ ಮಾಡಿದಾಗ ತಾವೂ ಬೆಲೆಬಾಳುವಂತಹವರು ಆಗುವುದಿಲ್ಲ. ಒಂದೊಂದು ರತ್ನದ ಬೆಲೆಯನ್ನು ಪರೀಕ್ಷಿಸುವ ಪ್ರಯತ್ನ ಮಾಡಿ. ತಾವು ಬಾಪ್ ದಾದಾರ ಅಮೂಲ್ಯವಾದ ರತ್ನವಾಗಿದ್ದೀರಲ್ಲವೇ? ಅಮೂಲ್ಯವಾದ ರತ್ನವನ್ನು ಏನು ಮಾಡಲಾಗುತ್ತದೆ? (ಬಚ್ಚಿಡಲಾಗುತ್ತದೆ). ಬಾಪ್ ದಾದಾರವರು ಅವರ ಅಮೂಲ್ಯ ರತ್ನಗಳನ್ನು ಮಾಯೆಯಿಂದ ಬಚ್ಚಿಡುತ್ತಾರೆ. ಎಲ್ಲಿಡುತ್ತಾರೆ? ಯಾರು ಎಷ್ಟು ಅಮೂಲ್ಯವಾದವರೋ ಅಷ್ಟು ಬಾಪ್ ದಾದಾರ ಹೃದಯ ಸಿಂಹಾಸನದ ಮೇಲೆ ನಿವಾಸ ಮಾಡುತ್ತಾರೆ. ಯಾವಾಗ ಹೃದಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವಿರೋ ಆಗ ರಾಜ್ಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವಿರಿ. ಹಾಗಾದರೆ ಸಂಗಮ ಯುಗದ ಸಿಂಹಾಸನ ಯಾವುದು? ಸಿಂಹಾಸನವಿದೆಯೋ ಅಥವಾ ಭಿಕ್ಷುಕರಾಗಿದ್ದೀರೋ? ಸಂಗಮಯುಗದಲ್ಲಿ ಎಂತಹ ಸಿಂಹಾಸನ ಸಿಗುತ್ತದೆ? ಬಾಪ್ ದಾದಾರ ಹೃದಯ ಸಿಂಹಾಸನ. ಇದು ಇಡೀ ವಿಶ್ವದ ಸಿಂಹಾಸನಗಳಲ್ಲಿ ಅತಿ ಶ್ರೇಷ್ಠವಾದುದು. ಸತ್ಯಯುಗದಲ್ಲಿ ಎಷ್ಟೇ ದೊಡ್ಡ ಸಿಂಹಾಸನ ಸಿಕ್ಕರೂ ಇದರ ಮುಂದೆ ಅದೇನು? ಇದರ ಮೇಲಿರುವುದರಿಂದ ಮಾಯೆ ಏನೂ ಮಾಡಲಾರದು. ಇದರ ಮೇಲೆ ಇಳಿಯುವ ಮತ್ತು ಹತ್ತುವ ಕಾರ್ಯವಿರುವುದಿಲ್ಲ. ಇದರ ಮೇಲಿರುವುದರಿಂದ ಮಾಯೆಯ ಸರ್ವ ಬಂಧನಗಳಿಂದ ಮುಕ್ತರಾಗುವಿರಿ, ಒಳ್ಳೆಯದು.

ಅವ್ಯಕ್ತ ಮುರಳಿ 13-11-1969.

**ಬಾಪ್ ದಾದಾರವರ ಭರವಸೆಗಳು.**

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಿವತಂದೆಯ ಸಮಾನ.. ಅಶರೀರಿಯಾಗಿ ಮತ್ತೆ ಶರೀರದಲ್ಲಿ ಬರುವ ಅಭ್ಯಾಸವನ್ನು ಮಾಡಿದ್ದೇನೆ.

2. ನಾನು ತಂದೆಯೊಂದಿಗೆ ಮಿಲನದ ಸೌಭಾಗ್ಯವನ್ನು ಪಡೆದಿರುವ ಶ್ರೇಷ್ಠಾತ್ಮನಾಗಿದ್ದೇನೆ.

3. ನಾನು ಭಾಗ್ಯದ ನಕ್ಷತ್ರ, ಬಾಪ್ ದಾದಾರವರ ನಯನದ ನಕ್ಷತ್ರ, ಮತ್ತು ಭರವಸೆಯ ನಕ್ಷತ್ರವಾಗಿದ್ದೇನೆ.

4. ನಾನು ಕ್ವಾಂಟಿಟಿ (ಸಂಖ್ಯೆ)ಯೊಂದಿಗೆ ಕ್ವಾಲಿಟಿ (ಗುಣಮಟ್ಟ) ಇರುವ ಅನೇಕ ಆತ್ಮರನ್ನು ತಯಾರು ಮಾಡಿದ್ದೇನೆ.

5. ನಾನು ದೈವೀ ಗುಣಗಳನ್ನು ಧಾರಣೆ ಮಾಡಿ ಕ್ವಾಲಿಟಿಯೊಂದಿಗೆ ಕ್ವಾಂಟಿಟಿಯನ್ನು ತರಬಲ್ಲವರನ್ನು ತಯಾರು ಮಾಡಿರುವ ಸಂತುಷ್ಟ ಸ್ವರೂಪ.

6. ನಾನು ಸಹಜವಾಗಿ ಪುರುಷಾರ್ಥ ಮಾಡಬಲ್ಲ ಧಾರಣಾಮೂರ್ತಿ.

7. ನಾನು ಸೂಕ್ಷ್ಮವಾದ (ಆಳವಾದ) ಬುದ್ಧಿಯಿಂದ ಜ್ಞಾನದ ಆಳಕ್ಕೆ ಹೋಗಿ ಎಲ್ಲರ ಶ್ರಮವನ್ನು ಸಮಾಪ್ತಿ ಮಾಡಿದ್ದೇನೆ.

8. ನಾನು ಬಾಪ್ ದಾದಾರವರ ಬೆಲೆಬಾಳುವ/ಅಮೂಲ್ಯ ರತ್ನ.

9. ನಾನು ಬಾಪ್ ದಾದಾರವರ ಹೃದಯ ಸಿಂಹಾಸನಾಧಿಕಾರಿ.

10. ನಾನು ಬಾಪ್ ದಾದಾರವರ ಹೃದಯ ಸಿಂಹಾಸನದ ಮೇಲೆ ಸದಾ ಕುಳಿತುಕೊಂಡು ಮಾಯೆಯ ಸರ್ವ ಬಂಧನಗಳಿಂದ ಮುಕ್ತಿಯನ್ನು ಹೊಂದಿದ್ದೇನೆ.